

ಉಪ್ಪಿನ ನೆಲವನ್ನು ನೇಗಿಲನ್ನು ಹೋಲುವ 'ದಾಂತಾರ'ದಿಂದ ಹದಗೊಳಿಸುತ್ತಿರುವ ಮಹಿಳೆ



ಗೋಕರ್ಣದಲ್ಲಿ ತಯಾರಾಗುತ್ತಿರುವ ಉಪ್ಪು

ಜೋಪಡಿ ಕಟ್ಟಿದ ನಂತರ ಬಾವಿ (ಕುಂವಾ) ತೋಡಲಾರಂಭಿಸುತ್ತಾರೆ. ಕಳೆದ ವರ್ಷ ತೆಗೆದ ಬಾವಿಯ ಗುರುತಿಗೆ ಬಾವುಟ ನೆಟ್ಟು ಹೋಗಿರುತ್ತಾರೆ. ಹೆಚ್ಚಾಗಿ ಇಬ್ಬರು ಸಹೋದರರು ಅಥವಾ ಸಂಬಂಧಿಗಳು ಕೆಳಗೆ ಇಳಿದು ತೋಡುತ್ತ ಹೋಗುತ್ತಾರೆ. ಇವರ ಹೆಂಡತಿಯರು ಕೆಸರು ಮಣ್ಣನ್ನು ಕೆಳಗಿನಿಂದ ಬುಟ್ಟಿಯಲ್ಲಿ ಇಸಿದುಕೊಂಡು ಮೇಲೆ ತುಸು ದೂರದಲ್ಲಿ ಸುರಿಯುತ್ತಾರೆ. ಅವರು ಬಾವಿ ತೋಡುವಾಗ ಇವರು, ಇವರು ಬಾವಿ ತೋಡುವಾಗ ಅವರು– ಮೈಯಾಳತನ ಎನ್ನುತ್ತೇವಲ್ಲ, ಹಾಗೆ– ಪರಸ್ಪರ ಸಹಾಯದಿಂದ ಬಾವಿ ತೋಡುತ್ತಾರೆ. ಬಾವಿ ಅಗೆಯುವಾಗ ಕೆಲವೊಮ್ಮೆ ಮೀಥೇನ್ ಅನಿಲ ಹೊರಹೊಮ್ಮುತ್ತದೆ. ಹೀಗಾಗಿ ಸ್ವಲ್ಪ ಸ್ವಲ್ಪ ಅಗೆದ ನಂತರ ಸೀಮೆಎಣ್ಣೆಯಲ್ಲಿ ಅದ್ದಿದ ಬಟ್ಟೆಯ ಕೋಲಿಗೆ ಬೆಂಕಿ ಹಚ್ಚಿ, ಅದು ಉರಿಯುತ್ತದೆಯಾ ಅಥವಾ ನಂದಿಹೋಗುತ್ತದೆಯಾ ನೋಡುತ್ತಿರುತ್ತಾರೆ. ಆದರೂ ಕೆಲವೊಮ್ಮೆ ಸಾಕಷ್ಟು ಕೆಳಗೆ ಹೋದ ನಂತರ ಆಕಸ್ಮಿಕವಾಗಿ ಸರಕ್ಕನೆ ಮೀಥೇನ್ ಹೊರಹೊಮ್ಮುವುದೂ ಇದೆಯಂತೆ. ಹಾಗೆ ಆಗೀಗ ಯಾರಾದರೂ ಪ್ರಾಣ ಕಳೆದುಕೊಳ್ಳುತ್ತಾರೆ. ಸುಮಾರು ಐವತ್ತು ಅಡಿ ಆಳದ ಗುಂಡಿ ತೋಡಿದ ನಂತರ ಬ್ರೈನ್ ಅಥವಾ ಲವಣಜಲ ಸಿಗುತ್ತದೆ.

ಬಾವಿ ತೋಡುವುದಕ್ಕೆ ಆರೇಳು ದಿನ ಹಿಡಿಯುತ್ತದೆ. ಬಾವಿ ತೋಡಿದ ನಂತರ ಪೈಪ್ ಇಳಿಬಿಟ್ಟು, ಸೋಲಾರ್ ಅಥವಾ ಡೀಸೆಲ್ ಮೋಟಾರ್ ಪಂಪನ್ನು ಅದಕ್ಕೆ ಜೋಡಿಸುತ್ತಾರೆ. ಐದಾರು ದಶಕಗಳ ಹಿಂದೆ, ಈ ಮೋಟಾರ್ ಪಂಪ್‌ಗಳು ರಣ್‌ಗೆ ಕಾಲಿಟ್ಟಿರಲಿಲ್ಲ. ಆಗ ಜಾನುವಾರುಗಳಿಂದ ಏತದ ಮಾದರಿಯಲ್ಲಿ ಬಾವಿಯಿಂದ ಲವಣಜಲವನ್ನು ಬಕೀಟುಗಳಲ್ಲಿ ಮೇಲೆ ಎತ್ತಿ ಗದ್ದೆಗಳಿಗೆ ಸುರಿಯುತ್ತಿದ್ದರಂತೆ.

"ನಾನು ನಾಕ್ಕೈದು ವರ್ಷದ ಹುಡುಗ ಆಗಿದ್ದಾಗಿನಿಂದಲೂ ಅಪ್ಪ–ಅಮ್ಮನ ಜೊತೆ ಇದೇ ಕೆಲಸ ಮಾಡುತ್ತ ಬೆಳೆದೆ. ಈಗ ಅವರಿಲ್ಲ. ನಾನು 15–20 ವರ್ಷದವನಿದ್ದೆ, ಆಗ ಮೊದಲ ಸಲ ಡೀಸೆಲ್ ಮಶಿನ್ ಬಂತು. ಏತದಿಂದ ನೀರೆತ್ತುವ ದಿನಗಳ ಕಷ್ಟ ನೆನೆಸಿಕೊಂಡರೆ, ನಮ್ಮ ಹಿರಿಯರು ಅಷ್ಟು ಕಠಿಣ ಪರಿಸ್ಥಿತಿಯಲ್ಲಿ ಹ್ಯಾಗೆ ಬದುಕುಳಿದರು ಅಂತ ಅಚ್ಚರಿಯಾಗುತ್ತದೆ. ಆಗೆಲ್ಲ ಊರಿನಿಂದ ತಂದ ಕಾಳುಕಡಿ ಖರ್ಚಾಗಿ, ಎಷ್ಟೋ ದಿನ ಬರೀ ಆಲೂಗಡ್ಡೆ ಬೇಯಿಸಿಕೊಂಡು ತಿಂದಿದ್ದೂ ಇದೆ" ಎನ್ನುತ್ತಾರೆ ರಾಮು ಭಾಯಿ.

ಮುಂದಿನ ಹಂತ ಗಾಮ್ಡಾ ಅಥವಾ ಚಿಕ್ಕಚಿಕ್ಕ ಗದ್ದೆಗಳನ್ನು ಸಿದ್ಧಪಡಿಸಿಕೊಳ್ಳುವುದು. ಎರಡು–ಮೂರು ಅಡಿ ಆಳವಿರುವ ಗದ್ದೆಗಳಿಗೆ ಬದು ಅಥವಾ ಏರಿ ಕಟ್ಟುತ್ತಾರೆ. ಅವಕ್ಕೆ ಪಾವಟಾ ಎನ್ನುತ್ತಾರೆ. ಒಂದೆರಡು ಗಾಮ್ಡಾ ಸಿದ್ಧಗೊಂಡ ನಂತರ ಅದಕ್ಕೆ ಈ ಲವಣಜಲವನ್ನು ಪಂಪಿನಿಂದ ಎತ್ತಿ ಮೊದಲ ಗಾಮ್ಡಾಗೆ ಬಿಡುತ್ತಾರೆ. ಮೊದಲ ಗಾಮ್ಡಾ ತುಂಬುವುದಕ್ಕೆ 10–12 ದಿನಗಳು ಬೇಕಾಗುತ್ತವೆ. ಈ ವೇಳೆಯಲ್ಲಿ ಲವಣಜಲವನ್ನು ಕೊನೆಯ ಬಾರಿ ಬಿಡುವುದಕ್ಕೆ, ಅಂದರೆ ಉಪ್ಪಿನ ಹರಳುಗಳು ರೂಪುಗೊಳ್ಳುವ ಕೊನೆಯ ಗದ್ದೆ ಪಾಟಾ ಸಿದ್ಧಮಾಡಿಕೊಳ್ಳುತ್ತಾರೆ. ಪಾಟಾ ಈ ಎಲ್ಲ ಗಾಮ್ಡಾಗಳಿಗಿಂತ ದೊಡ್ಡದಿರುವ ಗದ್ದೆ. ಈ ಗದ್ದೆಯ ನೆಲವನ್ನು ತುಳಿದು ಗಟ್ಟಿಗೊಳಿಸಬೇಕು. ಅಂದರೆ, ಎರಡೂ ಪಾದಗಳಿಂದ ನೆಲವನ್ನು ಬಲವಾಗಿ ಒತ್ತುತ್ತಾ ಹೋಗುತ್ತಾರೆ. ನೆಲದಲ್ಲಿ ಯಾವುದೇ ಬಿರುಕುಗಳು ಉಳಿಯದೇ, ಅಂಟಂಟಾದ ಮಣ್ಣು ಹದಗೊಂಡು, ಗಟ್ಟಿಯಾದ ಸಪಾಟಾದ ನೆಲವಾಗಬೇಕು. ಅದಕ್ಕೆ 'ಪಗಲಿ' ಮಾಡುವುದು ಎನ್ನುತ್ತಾರೆ. ಬರಿಗಾಲಿನಲ್ಲಿಯೇ ಇದನ್ನು ಮಾಡುತ್ತಾರೆ. ಅಕ್ಟೋಬರ್ ಕೊನೆಯಲ್ಲಿ ಬಿಸಿಲು